## ಅಜ್ಜಿಗೆ 'ಪಾನಿಪುರಿ' ಆಗಿದೆ!

ಐದು ವರ್ಷದ ಮೊಮ್ಮಗಳನ್ನು ಮನೆ ಹತ್ತಿರದ ಪಾರ್ಕಿಗೆ ಕರೆದುಕೊಂಡು ಹೋಗಿದ್ದೆ. ಇದ್ದಕ್ಕಿದ್ದಂತೆ ಭಾರೀ ಮೋಡಗಳೊಂದಿಗೆ ಕತ್ತಲಾವರಿಸಿ ಮಳೆ ಸಹ ಬರಲಾರಂಭಿಸಿತು. ಅಲ್ಲಿಯೇ ಪಾರ್ಕಿನಲ್ಲಿ ಶೀಟ್ ಹಾಕಿದ್ದ ಎತ್ತರದ ವೇದಿಕೆ ಮೇಲೆ ಹೋಗಿ ನಿಂತಾಗ...

ನಾಲ್ಕೈದು ಮಹಿಳೆಯರಿದ್ದ ಗುಂಪಿನಲ್ಲಿದ್ದ ಅಜ್ಜಿ, ನನ್ನೊಂದಿಗೆ ನಿಂತಿದ್ದ ಮೊಮ್ಮಗಳನ್ನು ತನ್ನೆಡೆಗೆ ಕರೆದುಕೊಂಡರು. ಆಕೆಯನ್ನು ಕುಳ್ಳಿರಿಸಿ ಮಾತನಾಡುತ್ತಾ ಸಲುಗೆಯಿಂದ ಮೊಮ್ಮಗಳ ಕೈಯಲ್ಲಿದ್ದ ಮೊಬೈಲಿನಲ್ಲಿ ಫೋಟೊ ನೋಡ್ತಾ ಇವ್ರು ಯಾರು? ಇವ್ರು ಯಾರು? ಎಂದು ಕೇಳಿದರು.

'ಇವರು ಅಜ್ಜ... ಅಪ್ಪಾ...' ಎಂದೆಲ್ಲಾ ಹೇಳ್ತಾ ಇದ್ದಂತೆ, ಅವಳ ಅಜ್ಜಿಯ ಪಾದಕ್ಕೆ ಗಾಯ ಆಗಿರುವ ಫೋಟೊ ಬಂದೊಡನೆ...ಅಜ್ಜಿಗೆ ಪಾನಿಪೂರಿ ಆಗೈತೆ ಎಂದಳು. ಈ ವಿಷಯ ಪ್ರಶ್ನೆ ಕೇಳಿದ ಅಜ್ಜಿಗೆ ಅರ್ಥ ಆಗಲಿಲ್ಲ.

ಆಗ ನಾನು ಇವಳ ಅಜ್ಜಿಯ ಕಾಲಿನ ಮೇಲೆ



ಬಿಸಿ ಬಿಸಿ ನೀರು ಬಿದ್ದಿದ್ದರಿಂದ ಚರ್ಮದ ಮೇಲೆ ನೀರು ತುಂಬಿದ ಗುಳ್ಳೆಗಳು ಊದಿಕೊಂಡಿದ್ದವು. ಅವು ನೋಡಲು ಪಾನಿಪೂರಿಯಂತೆ ಕಂಡಿದ್ದರಿಂದ ಈ ಮೊಮ್ಮಗಳು ಅಜ್ಜಿಕಾಲು 'ಪಾನಿಪೂರಿ' ಅಂತ ಕರೆಯುತ್ತಾಳೆ ಎಂದು ಹೇಳಿದಾಗ ಎಲ್ಲರೂ ನಕ್ಕಿದ್ದೇ ನಕ್ಕಿದ್ದು.

**ರಘುನಾಥರಾವ್ ತಾಪ್ಸೆ**

## ನಾನು ಸೇದಿದರೆ?

ಗೂರಲು ಕೆಮ್ಮಿನಿಂದ ವಿಪರೀತವಾಗಿ ಬಳಲುತ್ತಿದ್ದ ಗುಂಡ ತಡೆಯಲಾರದೆ ಕೊನೆಗೆ ತನ್ನ ಪರಿಚಿತ ವೈದ್ಯರಲ್ಲಿಗೆ ಓಡಿದ. ಕೂಲಂಕಷವಾಗಿ ಅವನನ್ನು ಪರೀಕ್ಷಿಸಿದ ವೈದ್ಯರು ಒಂದೆರಡು ಮಾತ್ರೆ ಮತ್ತು ಸಿರಪ್ಪನ್ನು ಬರೆದು ಕೊಡುತ್ತ 'ಅಂದ ಹಾಗೆ ನಿಮಗೆ ಸಿಗರೇಟು ಸೇದುವ ಚಟವಿದೆಯೇ? ದಿನಕ್ಕೆ ಎಷ್ಟು ಸೇದುತ್ತೀರಾ?' ಎಂದು ಕೇಳಿದರು.

ಗುಂಡ 'ಹೌದು ಡಾಕ್ಟ್ರೇ ದಿನಕ್ಕೆ ಒಂದು ಪ್ಯಾಕ್ ಸೇದುತ್ತೇನೆ' ಎಂದ.

ಅವರು ಅದನ್ನು ಆದಷ್ಟು ಕಡಿಮೆ ಮಾಡಲು ಹೇಳಿದಾಗ ಗುಂಡ 'ಡಾಕ್ಟ್ರೇ ಸಿಗರೇಟು ಸೇದುವುದರಿಂದ ಕ್ಯಾನ್ಸರ್ ಬರುತ್ತದಂತೆ ಹೌದಾ?' ಎಂದು ಪ್ರಶ್ನಿಸಿದ. ಅವರು 'ಹೌದು. ಅದು ತುಂಬಾ ಅಪಾಯಕಾರಿ' ಎಂದರು.

ಆದಕ್ಕೆ ಗುಂಡ 'ಮತ್ತೆ ನಾನು ಸೇದಿದರೆ ಹೊಗೆ



ಬರುತ್ತದಲ್ಲಾ ಯಾಕೆ?' ಎಂದು ಕೇಳಿದ. ವೈದ್ಯರು ಕಕ್ಕಾಬಿಕ್ಕಿಯಾಗಿದ್ದರು.

**ಮಂಜುನಾಥ ಎಂ.ಕೆ.**